# ದಿನಾಂಕ 29/06/2010 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

**ವಿಷಯದ ಸಂಖ್ಯೆ: 10(49)/2010–11**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಾಸರಹಳ್ಳಿ ಕೆರೆಯಲ್ಲಿ 1 ಎಂ.ಎಲ್.ಡಿ ಸಾಮರ್ಥ್ಯದ ನೀರು ಸಂಸ್ಕರಣಾ ಘಟಕ (Water Reclamation Plant) ರ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು–2, (ಯೋಜನೆ–2) ರವರು ಮೊದಲನೇ ಕರೆಯಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಆಧಾರದ ಮೇಲೆ ಪೂರ್ವಾರ್ಹತೆಯ ಟೆಂಡರ್ ಆಹ್ವಾನಿಸಿರುತ್ತಾರೆ, ಸದರಿ ಟೆಂಡರ್‌ಗೆ ಎರಡು ಗುತ್ತಿಗೆದಾರ ಸಂಸ್ಥೆಯವರು ತಮ್ಮ ಪೂರ್ವಾರ್ಹತೆಯ ಬಿಡ್‌ಗಳನ್ನು ಸಲ್ಲಿಸಿದ್ದು, ಎರಡೂ ಸಂಸ್ಥೆಯವರು ಪೂರ್ವಾರ್ಹತೆಯ ತಾಂತ್ರಿಕ ಬಿಡ್‌ನಲ್ಲಿ ಸಿಂಧುವಾಗಿ ಆರ್.ಎಫ್.ಪಿ ದಾಖಲೆಗಳನ್ನು ಪಡೆದಿರುತ್ತಾರೆ ಮತ್ತು ಒಂದು ಸಂಸ್ಥೆಯವರು ತಮ್ಮ ಆರ್ಥಿಕ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಹಾಗೂ ಕಾರ್ಯಪಾಲಕ ಅಭಿಯಂತರರು–2 (ಯೋಜನೆ–2) ರವರು ಪೂರ್ವಾರ್ಹತೆಯಲ್ಲಿ ಯಶಸ್ವಿ ಬಿಡ್‌ದಾರರಾದ ಹಾಗೂ ತಮ್ಮ ಆರ್ಥಿಕ ಪ್ರಸ್ತಾವನೆಯನ್ನು ಸಲ್ಲಿಸಿರುವ ಮೆ॥ ಸೆಪ್ಕಾನ್ ಸಿಸ್ಟಮ್ ಪ್ರೈ ಲಿ. ರವರ ಟೆಂಡರ್‌ನ್ನ ಅನುಮೋದನೆಗಾಗಿ ಮಂಡಿಸಿರುತ್ತಾರೆ.

ರೂ.405.00 ಲಕ್ಷಗಳ ಅಂದಾಜುಪಟ್ಟಿಗೆ 2009–10ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಪಟ್ಟಿಯ ಆಧಾರದ ಮೇಲೆ ಮುಖ್ಯ ಅಭಿಯಂತರರು–2 (ಯೋಜನೆ–2) ರವರು ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ ರೂ.4,02,67,081.00 ಗಳಾಗಿದ್ದು, ಮಂಜೂರಾದ ದರಗಳಿಗೆ ಗುತ್ತಿಗೆದಾರ ಸಂಸ್ಥೆಯಾದ ಮೆ॥ ಸೆಪ್ಕಾನ್ ಸಿಸ್ಟಮ್ ಪ್ರೈ ಲಿ. ರವರು ಶೇ.5.80% ರಷ್ಟು ಹೆಚ್ಚುವರಿ ದರಗಳನ್ನು ನಮೂದಿಸಿದ್ದು, ಪೂರ್ವಾರ್ಹತೆಯ ಸಿಂಧುತ್ವ ಪಡೆದಿರುವ ಕನಿಷ್ಠ ಟೆಂಡರುದಾರ ಸಂಸ್ಥೆಯಾಗಿರುತ್ತದೆ. ಹಾಗೂ ಸದರಿ ಟೆಂಡರ್‌ನ್ನು ಅನುಮೋದಿಸಲು ಮುಖ್ಯ ಅಭಿಯಂತರರು–2 (ಯೋಜನೆ–2) ರವರು ಅನುಮೋದನೆಗೆ ಶಿಫಾರಸ್ಸು ಮಾಡಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಸದರಿ ಕಾಮಗಾರಿಯನ್ನು ಮಾನ್ಯ ಆಡಳಿತಾಧಿಕಾರಿಗಳ ಅನುಮೋದನೆಯಂತೆ DBFOT/Annuity ಮಾದರಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಕಾಮಗಾರಿಯ ವಿನ್ಯಾಸ, ನಿರ್ಮಾಣ ಹಾಗೂ 5 ವರ್ಷಗಳ ನಿರ್ವಹಣೆ ಮಾಡಲು Annuity basis ನಂತೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಸದರಿಯವರು ನಮೂದಿಸಿರುವ ಟೆಂಡರ್ ಮೊತ್ತದ Cost Breakup ನ ವಿವರ, ಗುತ್ತಿಗೆ ಹಣ ಪಾವತಿಸುವ ಕಂತುಗಳ ವಿವರವನ್ನು ಅನುಬಂಧ–(1) ರಲ್ಲಿರುವಂತೆ ಸದರಿ ಟೆಂಡರ್‌ನ್ನು ಅನುಮೋದಿಸಲು ಮುಖ್ಯ ಅಭಿಯಂತರರು–2 (ಯೋಜನೆ–2) ರವರು ಶಿಫಾರಸ್ಸು ಮಾಡಿರುತ್ತಾರೆ.

ಮೇಲಿನ ಅಂಶಗಳನ್ನು ಪರಿಶೀಲಿಸಲಾಗಿ ಟೆಂಡರ್‌ನ ಒಟ್ಟು ಮೊತ್ತವು (ಟೆಂಡರ್ ಪ್ರೀಮಿಯಂ ಸೇರಿ) ರೂ.4,27,46,279.00 ಗಳಾಗಿದ್ದು ಸರ್ಕಾರದ ಆದೇಶ ಸಂಖ್ಯೆ: ಯು.ಡಿ.ಡಿ/335/ಎಮ್‌ಎನ್‌ಯು/2007 (ಭಾ), ದಿನಾಂಕ: 11–05–2009 ರೀತ್ಯಾ ಕರ್ನಾಟಕ ಮುನಿಸಿಪಲ್ ಕಾಯ್ದೆ ನಿಯಮಗಳು 1977 ನಿಯಮ 6 ಕ್ಕೆ ಹೆಚ್ಚಿನ ಆರ್ಥಿಕ ಅಧಿಕಾರಗಳ ತಿದ್ದುಪಡಿಯನ್ನು ಬಾಕಿ ಇಟ್ಟುಕೊಂಡು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೆಚ್ಚಿನ ಆರ್ಥಿಕ ಅಧಿಕಾರದ ಪ್ರತ್ಯಾಯೋಜನೆಯ ಶಿಫಾರಸ್ಸನ್ನು ಸರ್ಕಾರವು ಅಂಗೀಕರಿಸಿದ್ದು, ಇದರಂತೆ ಟೆಂಡರ್ ಅಂಗೀಕರಿಸುವ ಪ್ರಾಧಿಕಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರ ಸಂಸ್ಥೆಯಾದ ಮೆ॥ ಸೆಪ್ಯಾಕ್ ಸಿಸ್ಟಮ್ ಪ್ರೈ ಲಿ. ರವರು 2009-10 ನೇ ಸಾಲಿನ ದರಪಟ್ಟಿಯ ಮೇಲೆ ನಮೂದಿಸಿರುವ ದರಗಳಾದ ಶೇ.5.80% ರಷ್ಟು ಹೆಚ್ಚಿನ ದರಗಳು ಅಥವಾ ರೂ.4,27,46,279.00 (ರೂಪಾಯಿ ನಾಲ್ಕು ಕೋಟಿ ಇಪ್ಪತ್ತೇಳು ಲಕ್ಷದ ನಲವತ್ತಾರು ಸಾವಿರದ ಎರಡುನೂರ ಎಪ್ಪತ್ತೊಂಬತ್ತು ಮಾತ್ರ) ಗಳ ಟೆಂಡರ್‌ನ್ನು ಅನುಮೋದಿಸಲು ಹಾಗೂ ಸದರಿ ಗುತ್ತಿಗೆದಾರ ಸಂಸ್ಥೆಗೆ ಅನುಬಂಧ(1) ರಂತೆ ಕಾಮಗಾರಿ ನಿರ್ವಹಣೆಗೆ ಹಣ ಪಾವತಿ ಮಾಡಲು ಅನುಮೋದನೆಗೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಗೆ ಮಂಡಿಸಿರುವ ಆಯುಕ್ತರವರ ದಿನಾಂಕ: 17/04/2010 ರ ಟಿಪ್ಪಣಿ.

ಆಡಳಿತ ಪಕ್ಷದ ನಾಯಕರಾದ ಶ್ರೀ.ಬಿ.ಎಸ್.ಸತ್ಯನಾರಾಯಣರವರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

" ದಿನಾಂಕ:17/04/2010ರ ಆಯುಕ್ತರವರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ವೆಂಕಟೇಶ್‌ಮೂರ್ತಿರವರು ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ದಿನಾಂಕ:17/04/2010ರ ಆಯುಕ್ತರವರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಎಸ್.ಕೆ. ನಟರಾಜ)
ಮಹಾಪೌರರು